ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು ಹಿರಿಯೂರು

ಇವರ ನ್ಯಾಯಾಲಯದಲ್ಲಿ

**MVC** 161/2024

ಪಿ ಡಬ್ಲು – 1

| | | |
|---|---|---|
| ಸಾಕ್ಷಿಯ ಹೆಸರು | : | ಶಬೀನಬೇಗಂ |
| ಗಂಡನ ಹೆಸರು | : | ಲೇ ರಹೀಮ್ |
| ವಯಸ್ಸು | : | **34** ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ | : | ಪಿಟ್ಲಾಲಿ ಗ್ರಾಮ ಹಿರಿಯೂರು ತಾ. |

ಸಾಕ್ಷಿಯನ್ನು ದಿಃ **18.12.2025** ರಂದು ಕರೆಯಿಸಿ ಪ್ರಮಾಣ ವಚನ ಬೊಧಿಸಲಾಯಿತು.

**ಮುಖ್ಯ ವಿಚಾರಣೆ : ಅರ್ಜಿದಾರರ ಪರ ಶ್ರೀ ಸಿ ಎಂ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಬಾಬ್ತು ನನ್ನ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಅಂಶಗಳು ಸತ್ಯವಾಗಿರುತ್ತವೆ. ಸದರಿ ಪ್ರಮಾಣ ಪತ್ರಕ್ಕೆ ನಾನು ಸಹಿ ಮಾಡಿದ್ದೇನೆ.

ಎಫ್ ಐ ಆರ್ ನಿಪಿ–1

ಹೇಳಿಕೆ ನಿಪಿ–2

ಪಂಚನಾಮೆ ನಿಪಿ–3

ಶವತನಿಖಾ ವರದಿ ನಿಪಿ–4

ಶವ ಪರೀಕ್ಷಾ ವರದಿ ನಿಪಿ–5

ಐ ಎಂ ವಿ ವರದಿ ನಿಪಿ–6

ಅಂತಿಮ ವರದಿ ನಿಪಿ–7

ಆಧಾರ್ ಕಾರ್ಡ್ ನಿಪಿ–8

ಸಾನಿಯಾ ಇವರ ಆಧಾರ್ ಕಾರ್ಡ್ ನಿಪಿ–9

ಸರ್ಮಿನ್ ಆರ್ ಆಧಾರ್ ಕಾರ್ಡ್ ನಿಪಿ–10

ಶಾಜಾನ್ ಸಾಬ್ ಆಧಾರ್ ಕಾರ್ಡ್ ನಿಪಿ–11

ಮುಮ್ತಾಜ್ ಆಧಾರ್ ಕಾರ್ಡ್ ನಿಪಿ– 12

ರಹೀಮ್ ಆಧಾರ್ ಕಾರ್ಡ್ ನಿಪಿ– 13

ಜಿ ಟ್ರೀ ನಿಪಿ– 14 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಎದುರುದಾರರ ಪರ ವಕೀಲರಿಂದಃ**

ನನ್ನ ಗಂಡ ವಿದಾಭ್ಯಾಸ ಮಾಡಿರುವುದಿಲ್ಲ. ನನ್ನ ಗಂಡ ಮೃತ ಪಟ್ಟಾಗ 40 ವರ್ಷ ವಯಸ್ಸಾಗಿತ್ತು ಎಂದರೆ 38 ವರ್ಷ ಎಂದು ನುಡಿಯುತ್ತಾರೆ. , ನನ್ನ ದೊಡ್ಡ ಮಗಳಿಗೆ 18 ವರ್ಷ ನನ್ನ ಗಂಡನಿಗೆ ಮದುವೆಯಾಗುವಾಗ 20 ವರ್ಷ ವಯಸ್ಸಾಗಿತ್ತು. ನನಗೆ ಮದುವೆಯಾಗುವಾಗ 16 ವರ್ಷ ವಯಸ್ಸಾಗಿತ್ತು. ಅಪಘಾತವನ್ನು ನಾನು ನೋಡಿಲ್ಲ. ನನ್ನ ಗಂಡನ ಹೆಸರಿಗೆ ಯಾವುದೇ ಜಮೀನು ಇರುವುದಿಲ್ಲ. ನನ್ನ ಗಂಡನ ಸಂಪಾದನೆ ಸಾಕಾಗುವುದಿಲ್ಲ ಎಂದು ನಾನು ಕೆಲಸಕ್ಕೆ ಹೋಗುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ಗಂಡ ಗಾರೆ ಕೆಲಸದಿಂದ ರೂ.40 ಸಾವಿರ , ವ್ಯವಸಾಯದಿಂದ ವರ್ಷಕ್ಕೆ 3 ಲಕ್ಷ ದುಡಿಯುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ನನ್ನ ಗಂಡ ವ್ಯವಸಾಯ ಮತ್ತು ಗಾರೆ ಕೆಲಸ ಮಾಡುತ್ತಿದ್ದರು ಎಂದು ಸುಳ್ಳು ಹೆಳುತ್ತಿದ್ದೇನೆ ಎಂದರೆ ಸರಿಯಲ್ಲ.. ಶವ ಸಂಸ್ಕಾರಕ್ಕೆ ರೂ.1 ½ ಲಕ್ಷ ಖರ್ಚಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಮೃತ ಪಟ್ಟ ನಂತರ ನಮಗೆ ತೊಂದರೆಗಳಾಗಿವೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**1 ನೇ ಎದುರುದಾರರ ಪರ ವಕೀಲರು ಗೈರು ಹಾಜರು ಅವರ ಪರ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಹಿರಿಯೂರು